ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ರಾಮನಗರ ನಗರದ ಅರ್ಕೇಶ್ವರ ಬಡಾವಣೆಯಲ್ಲಿ, ನೆರೆಗೆ ಸಿಲುಕಿದ ಮನೆಗಳ ಮತ್ತು ಬೀದಿಗಳ ಸ್ವಚ್ಛತಾ ಕಾರ್ಯ ಸೇವಾಭಾರತಿಯ ಸ್ವಯಂ ಸೇವಕರು ಮಾಡುತ್ತಿರುವ ದೃಶ್ಯ.


ಸಂಪುಟ : 44 | ಸಂಚಿಕೆ : 11 | ಶುಭಕೃತ್ – ಆಶ್ವಯುಜ | ಕಲಿಯುಗಾಬ್ದ 5124 | 15–09–2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಭಾರತದ ಮೊದಲ ಸ್ವದೇಶಿ ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್ ಲೋಕಾರ್ಪಣೆ

"ಐಎನ್‌ಎಸ್ ವಿಕ್ರಾಂತ್ ಕೇವಲ ಯುದ್ಧನೌಕೆಯಲ್ಲ ಬದಲಾಗಿ 21ನೇ ಶತಮಾನದ ಭಾರತದ ಕಠಿಣ ಪರಿಶ್ರಮ, ಪ್ರತಿಭೆ, ಪ್ರಭಾವ ಮತ್ತು ಬದ್ಧತೆಗೆ ಸಾಕ್ಷಿಯಾಗಿದೆ. ದೇಶದ ರಕ್ಷಣಾ ವಲಯವನ್ನು ಸ್ವಾವಲಂಬಿಯನ್ನಾಗಿ ಮಾಡುವ ಕೇಂದ್ರ ಸರ್ಕಾರದ ಪ್ರಯತ್ನಕ್ಕೆ ಐಎನ್‌ಎಸ್ ವಿಕ್ರಾಂತ್ ಸೇರ್ಪಡೆ ಸ್ಪಷ್ಟ ಉದಾಹರಣೆ. ತನ್ನದೇ ಆದ ವಿಮಾನವಾಹಕ ನೌಕೆ ಹೊಂದಿರುವ ಆಯ್ದ ರಾಷ್ಟ್ರಗಳ ಗುಂಪಿಗೆ ಭಾರತ ಸೇರಿದಂತಾಗಿದೆ" ಎಂದು ಪ್ರಧಾನಮಂತ್ರಿ ನರೇಂದ್ರಮೋದಿ



ಹೇಳಿದರು. ಕೇರಳದ ಕೊಚ್ಚಿನ್ನ ಶಿಪ್ ಯಾರ್ಡ್‌ನಲ್ಲಿ ದೇಶೀಯ ತಂತ್ರಜ್ಞಾನದೊಂದಿಗೆ ನಿರ್ಮಾಣ ಮಾಡಿರುವ ಐಎನ್‌ಎಸ್ ವಿಕ್ರಾಂತ್‌ನ ಕಾರ್ಯಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಐಎನ್‌ಎಸ್ ವಿಕ್ರಾಂತ್ ಅನ್ನು ಛತ್ರಪತಿ ಶಿವಾಜಿ ಮಹಾರಾಜರಿಗೆ ಅರ್ಪಿಸಿದರು.

"ಗುರಿ ಎಷ್ಟೇ ಕಠಿಣವಾಗಿರಲಿ, ಎಷ್ಟೇ ದೊಡ್ಡ ಸವಾಲುಗಳಾಗಲಿ, ಭಾರತ ಯಾವುದೇ ಗುರಿ ಸಾಧಿಸುವುದು ಭಾರತಕ್ಕೆ ಅಸಾಧ್ಯವಲ್ಲ, ದೇಶೀಯ ತಂತ್ರಜ್ಞಾನದೊಂದಿಗೆ ನಿರ್ಮಾಣವಾಗಿರುವ ಅತಿ ದೊಡ್ಡ ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್ ವಿವಿಧ ದೇಶಗಳ ಸಾಲಿಗೆ ಸೇರ್ಪಡೆಯಾಗಿದೆ. ಇದಕ್ಕಾಗಿ ಭಾರತೀಯ ನೌಕಾಪಡೆ, ಎಲ್ಲಾ ಇಂಜಿನಿಯರ್‌ಗಳು, ವಿಜ್ಞಾನಿಗಳು ಮತ್ತು ಕೊಚ್ಚಿನ್ ಶಿಪ್‌ಯಾರ್ಡ್‌ನ ಕಾರ್ಮಿಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ" ಎಂದು ಅವರು ತಿಳಿಸಿದರು.

"ವಿಮಾನವಾಹಕ ನೌಕೆ ನಿರ್ಮಾಣ, ಭಾರತವನ್ನು ಜಾಗತಿಕ ದಿಗಂತದತ್ತ ಕೊಂಡೊಯ್ಯಲು ಸಹಕಾರಿಯಾಗಿದೆ, ಜೊತೆಗೆ ಹೊಸ ವಿಶ್ವಾಸದಿಂದ ತುಂಬಿದೆ. ಇದೊಂದು ಈ ಐತಿಹಾಸಿಕ ಕ್ಷಣ. ಈ ಸಂದರ್ಭದಲ್ಲಿ ಭಾಗಿಯಾಗಿರುವುದು ಸಂತಸ ತಂದಿದೆ. ಕೇರಳದ ಕಡಲತೀರದಲ್ಲಿ ಪ್ರತಿಯೊಬ್ಬ ಭಾರತೀಯನಿಗೂ ಹೊಸ ಭವಿಷ್ಯದ ಸೂರ್ಯೋದಯಕ್ಕೆ ಸಾಕ್ಷಿಯಾಗಿದೆ. ಜೊತೆಗೆ ಜಾಗತಿಕ ದಿಗಂತದಲ್ಲಿ ಭಾರತದ ನೈತಿಕತೆಯನ್ನು ಬಲಪಡಿಸುವ ಕರೆಯಾಗಿದೆ. ಜೊತೆಗೆ ವಿಕ್ರಾಂತ್ ಭವ್ಯವಾಗಿದೆ, ವಿಭಿನ್ನವಾಗಿದೆ ಮತ್ತು ವಿಶೇಷವಾಗಿದೆ" ಎಂದರು.

ಭಾರತೀಯ ನೌಕಾಪಡೆಯ ಆಂತರಿಕ ಯುದ್ಧನೌಕೆ ವಿನ್ಯಾಸ ಕೇಂದ್ರ (WDB) ವಿನ್ಯಾಸಗೊಳಿಸಿದ ಮತ್ತು ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯದ ಅಡಿಯಲ್ಲಿ ಸಾರ್ವಜನಿಕ ವಲಯದ ನೌಕಾನೆಲೆ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್‌ನಿಂದ ನಿರ್ಮಿಸಲ್ಪಟ್ಟಿರುವ ಐಎನ್‌ಎಸ್ ವಿಕ್ರಾಂತ್, ಅತ್ಯಾಧುನಿಕ ವೈಶಿಷ್ಟ್ಯಗಳೊಂದಿಗೆ ನಿರ್ಮಿಸಲಾಗಿದೆ. ಭಾರತದ ಕಡಲ ಇತಿಹಾಸದಲ್ಲಿ ಇದುವರೆಗೆ ನಿರ್ಮಿಸಲಾದ ಅತಿದೊಡ್ಡ ಹಡಗು ಇದಾಗಿರುವುದು ವಿಶೇಷ.

1971ರ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಭಾರತದ ಮೊದಲ ವಿಮಾನವಾಹಕ ನೌಕೆಯಾದ ವಿಕ್ರಾಂತ್ ಹೆಸರನ್ನು ಈ ಸ್ವದೇಶಿ ವಿಮಾನವಾಹಕ ನೌಕೆಗೆ ಇಡಲಾಗಿದೆ. ಇದು ದೊಡ್ಡ ಪ್ರಮಾಣದ ಸ್ಥಳೀಯ ಉಪಕರಣಗಳು ಮತ್ತು ಯಂತ್ರೋಪಕರಣಗಳನ್ನು ಹೊಂದಿದೆ, ದೇಶದ ಪ್ರಮುಖ ಕೈಗಾರಿಕಾ ಮನೆಗಳು ಮತ್ತು 100ಕ್ಕೂ ಹೆಚ್ಚು ಸಣ್ಣ, ಮಧ್ಯಮ ಮತ್ತು ಅತಿಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಒಳಗೊಂಡಿರುತ್ತದೆ. ವಿಕ್ರಾಂತ್ ಕಾರ್ಯಾರಂಭದೊಂದಿಗೆ, ಭಾರತವು ಎರಡು ಕಾರ್ಯಾಚರಣೆಯ ವಿಮಾನವಾಹಕ ನೌಕೆಗಳನ್ನು ಹೊಂದಿರುತ್ತದೆ. ಇದು ರಾಷ್ಟ್ರದ ಕಡಲ ಭದ್ರತೆಯನ್ನು ಹೆಚ್ಚಿಸುತ್ತದೆ.

ಭಾರತೀಯ ನೌಕಾಪಡೆಯ ಪ್ರಕಾರ, 262–ಮೀಟರ್ ಉದ್ದದ ವಾಹಕವು 45,000 ಟನ್‌ಗಳ ಸ್ಥಳಾಂತರವನ್ನು ಹೊಂದಿದೆ. ಇದು ಹಿಂದಿನ ವಿಕ್ರಾಂತ ವಿಮಾನ ವಾಹಕಕ್ಕಿಂತ ಹೆಚ್ಚು ದೊಡ್ಡದಾಗಿದೆ.


ವಿಮಾನ ವಾಹಕ ನೌಕೆಯ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡುತ್ತಾ ಮಾಹಿತಿ ನೀಡಿದ ಉಪ ಅಡ್ಮಿರಲ್ ಹಂಪಿಹೊಲಿ, ವಿಕ್ರಾಂತ್ ಸುಮಾರು 30 ವಿಮಾನಗಳನ್ನು ಒಯ್ಯುತ್ತದೆ. ಇದು MiG 29k ಯುದ್ಧ ವಿಮಾನವನ್ನು ವಾಯು ವಿರೋಧಿ, ಮೇಲ್ಮೈ ವಿರೋಧಿ ಮತ್ತು ಭೂ ದಾಳಿಯಲ್ಲಿ ಬಳಸಿಕೊಳ್ಳಬಹುದು. ಇದು Kamov 31 ಒಂದು ಆರಂಭಿಕ ವಾಯು ಎಚ್ಚರಿಕೆ ಹೆಲಿಕಾಪ್ಟರ್‌ನ್ನು ನಿರ್ವಹಿಸಲು ಸಾಧ್ಯವಾಗುತ್ತದೆ. ಇತ್ತೀಚೆಗೆ ಸೇರ್ಪಡೆಗೊಂಡ, ಆದರೆ ಇನ್ನೂ ಕಾರ್ಯಾರಂಭಿಸದ MH-60R ಇದು ಬಹು–ಪಾತ್ರ ಹೆಲಿಕಾಪ್ಟರ್ ಮತ್ತು ನಮ್ಮ ಸ್ಥಳೀಯ ALH ಆಗಿದೆ. ಭಾರತೀಯ ನೌಕಾ ದಾಸ್ತಾನುಗಳಲ್ಲಿ ಅತಿದೊಡ್ಡ ಯುದ್ಧನೌಕೆಯಾಗಿದೆ ಎಂದರು.

ಐಎಎಸ್ ವಿಕ್ರಾಂತ್ ಸೇರ್ಪಡೆಯೊಂದಿಗೆ, ಭಾರತವು ವಿಮಾನವಾಹಕ ನೌಕೆಯನ್ನು ಸ್ಥಳೀಯವಾಗಿ ವಿನ್ಯಾಸಗೊಳಿಸುವ ಮತ್ತು ನಿರ್ಮಿಸುವ ಸ್ಥಾಪಿತ ಸಾಮರ್ಥ್ಯವನ್ನು ಹೊಂದಿರುವ ಆಯ್ದ ರಾಷ್ಟ್ರಗಳ ಗುಂಪನ್ನು ಸೇರಿಕೊಂಡಿದೆ. ಸ್ವದೇಶಿ ನಿರ್ಮಿತ ವಿಮಾನ ವಾಹಕ ನೌಕೆ ವಿಕ್ರಾಂತ್ 14 ಡೆಕ್‌ಗಳನ್ನು ಹೊಂದಿದ್ದು 2,300 ಕಂಪಾರ್ಟ್‌ಮೆಂಟ್‌ಗಳನ್ನು ಒಳಗೊಂಡಿದೆ. ಇದು ಸುಮಾರು 1,500 ಸಮುದ್ರ ಯೋಧರನ್ನು ಹೊತ್ತೊಯ್ಯಬಲ್ಲದು. ಸಿಬ್ಬಂದಿಗಳಿಗೆ ಆಹಾರ ಅವಶ್ಯಕತೆಯನ್ನು ಒದಗಿಸಲು ಹಡಗಿನ ಅಡುಗೆಮನೆಯಲ್ಲಿ ಸುಮಾರು 10,000 ಚಪಾತಿ ಅಥವಾ ರೊಟ್ಟಿಗಳನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿದೆ. ಇದನ್ನು ಹಡಗಿನ ಗ್ಯಾಲಿ ಎಂದು ಕರೆಯಲಾಗುತ್ತದೆ.

## ಸಾವರ್ಕರ್ ಕುರಿತಾದ ವಿವಾದ ಖೇದಕರ ಬೆಳವಣಿಗೆ

ಭಾರತ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಆಚರಣೆ ಮಾಡುತ್ತಿದ್ದೇವೆ. ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮ ಇಡೀ ದೇಶದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಣೆ ಮಾಡುತ್ತಿರುವ ಈ ಹೊತ್ತಿನಲ್ಲಿ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಕುರಿತಾಗಿ ಬೃಹತ್ತಾದ ಅಪಪ್ರಚಾರ ಮಾಡುತ್ತಿರುವುದು ಮಾತ್ರವಲ್ಲ, ಸ್ವಾತಂತ್ರ್ಯ ಹೋರಾಟಗಾರರ ಹೆಸರಿನಲ್ಲಿ ಕೋಮು ಗಲಭೆಗಳಿಗೆ ಪ್ರಚೋದಿಸುವ ಕೆಲಸಗಳು ನಡೆಯುತ್ತಿದೆ. ಇತ್ತೀಚೆಗೆ ಮತ್ತೆ ಸಾವರ್ಕರ್ ಅವರ ವಿಚಾರಗಳನ್ನು ಮುನ್ನೆಲೆಗೆ ತರಲಾಗಿದೆ. ಅವರು ಬ್ರಿಟೀಷರಿಗೆ ಕ್ಷಮಾಪಣೆ ಕೇಳಿದ್ದರು, ಅಲ್ಲಿಂದ ಪಿಂಚಣಿ ಪಡೆಯುತ್ತಿದ್ದರು, ಅವರು ಹೇಡಿ ಎಂದೆಲ್ಲ, ಇಂದಿನ ನಾಯಕರು ಹಲುಬುತ್ತಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ನಡೆದ ಐತಿಹಾಸಿಕ ಘಟನೆಗಳನ್ನು ಅದರಲ್ಲೂ ವೈಯಕ್ತಿಕ ದಾಳಿ ಮಾಡಿ ಸ್ವಾತಂತ್ರ್ಯ ಹೋರಾಟಗಾರರ ಹೆಸರಿಗೆ ಮಸಿ ಬಳಿಯುವ ಕೆಲಸವನ್ನು ಕಾಂಗ್ರೆಸ್ ತನ್ನ ಹಿತಾಸಕ್ತಿಗಾಗಿ ಬೇಕಂತಲೇ ಮಾಡುತ್ತಾ ಬಂದಿದೆ. ಸಾವರ್ಕರ್ ಅವರ ಮೇಲಿನ ದಾಳಿ ಇಂದು ನಿನ್ನೆಯದಲ್ಲ, ಬದಲಾಗಿ ಗಾಂಧೀಜಿ ಹತ್ಯೆಯಲ್ಲೂ ಸುಖಾಸುಮ್ಮನೆ ಕಾಂಗ್ರೆಸ್ ಸಾವರ್ಕರ್ ಅವರ, ಸಂಘದ, ಇನ್ನಿತರ ಹಿಂದೂ ಮುಖಂಡರನ್ನು ಗುರಿ ಮಾಡಿ ಸೇಡು ಸಾಧಿಸಿತ್ತು. ಇನ್ನು ಅವರ ಕ್ಷಮಾಪಣೆಯ ವಿಚಾರ ಬಂದಾಗ, ಅಂದಿನ ದೇಶ ಕಾಲ ಪರಿಧಿಯಲ್ಲಿ ಅನೇಕ ಸ್ವಾತಂತ್ರ್ಯ ಹೋರಾಟಗಾರರೂ ಕ್ಷಮೆ ಕೇಳುವ ಪತ್ರಗಳನ್ನು ಬರೆದಿದ್ದರು. ಅಷ್ಟಕ್ಕೂ ವರ್ಷಾನುಗಟ್ಟಲೆ ಜೈಲಿನಲ್ಲಿ ಕೊಳೆಯುವುದರಿಂದ ಹೋರಾಟಕ್ಕೆ ಹಿನ್ನಡೆಯಾಗುತ್ತಿತ್ತೇ ಹೊರತು ಯಾವುದೇ ಪ್ರಯೋಜನವಿರಲಿಲ್ಲ. ಸಾವರ್ಕರರು ಮಾತ್ರವೇ ಅಲ್ಲ, ಶ್ರೀ ಅರವಿಂದ ಘೋಷರ ತಮ್ಮ ಬಾರಿಂದ್ರ ಕುಮಾರ್ ಘೋಷ್, ಸಚಿನ್ ಸನ್ಯಾಲ್ ಹೀಗೆ ಅನೇಕ ಮಂದಿ ಸಹ ಪತ್ರ ಬರೆದಿದ್ದರು. ಹಾಗಾದರೆ ಇವರೆಲ್ಲರ ಕೊಡುಗೆಯನ್ನೂ ಅಲ್ಲೆಗೆಳೆಯಲು ಸಾಧ್ಯವೆ?



ಅಷ್ಟಕ್ಕೂ ನಾಲ್ಕು ಬಾರಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಪಂಡಿತ್ ಮದನ್ ಮೋಹನ್ ಮಾಲವೀಯರು ಕಾಕೋರಿ ಮೊಕದ್ದಮೆಯಲ್ಲಿ ರಾಮ ಪ್ರಸಾದ ಬಿಸ್ಮಿಲ್ಲಾ, ಠಾಕುರ್ ರೋಷನ್ ಸಿಂಗ್, ರಾಜೇಂದ್ರ ಲಾಹಿರಿ, ಅಶ್ಫಾಕ್ ಉಲ್ಲಾ ಖಾನ್ರಿಗೆ ಮರಣದಂಡನೆಯಾದಾಗ ಸ್ವತಃ ತಾವೇ ಮೆಮೊರಾಂಡಂ ಒಂದನ್ನು ಸಿದ್ಧಪಡಿಸಿ ಅಂದಿನ ವೈಸ್ರಾಯ್ ಮತ್ತು ಗೌವರ್ನರ್ ಜನರಲ್ ಎಡ್ವರ್ಡ್ ಫೆಡ್ರಿಕ್ ಲಿಂಡ್ಲೇ ವುಡ್ ಅವರಿಗೆ ಸಲ್ಲಿಸಿದ್ದರು. ಅದರಲ್ಲಿ ಅಂದಿನ ಕಾಂಗ್ರೆಸ್ಸಿನ ಸೆಂಟ್ರಲ್ ಲೆಜಿಸ್ಲೇಟಿವ್ ಅಸೆಂಬ್ಲಿಯ 78 ಸದಸ್ಯರ ಸಹಿ ಕೂಡ ಇತ್ತು. ಹಾಗಾದರೆ ಕ್ರಾಂತಿಕಾರಿಗಳು, ಮದನ್ ಮೋಹನ ಮಾಲವೀಯರೂ ಸೇರಿದಂತೆ 78 ಮಂದಿ ಕಾಂಗ್ರೆಸ್ಸಿನ ಚುನಾಯಿತ ಸದಸ್ಯರೂ ಹೇಡಿಗಳೆ? ಅವರೂ ಸ್ವಾತಂತ್ರ್ಯ ಹೋರಾಟಕ್ಕೆ ಕೊಟ್ಟ ಕೊಡುಗೆ ಕಡಿಮೆಯೇ?

ಇನ್ನು ಗಾಂಧೀಜಿಯವರ ಹತ್ಯೆಯ ವಿಚಾರದಲ್ಲಿ ಸ್ವತಃ ಭಾರತದ ಸುಪ್ರಿಂ ಕೋರ್ಟ್ ತನ್ನ ತೀರ್ಪು ನೀಡಿದೆ. ಸಂವಿಧಾನದತ್ತವಾಗಿ ವಿಚಾರಣೆ ನಡೆದು, ಮೊಕದ್ದಮೆ ಖುಲಾಸೆಗೊಂಡ ದಶಕಗಳ ನಂತರವೂ ಕಾಂಗ್ರೆಸ್ ತನ್ನ ಹಳೆಯ ರಾಗವನ್ನೇ ಹಾಡುತ್ತಾ ಸುಪ್ರಿಂಕೋರ್ಟಿನ ತೀರ್ಪನ್ನೂ ಕೂಡ ಅಗೌರವದಿಂದ ಕಾಣುತ್ತಿದೆ. ಇದೊಂದು ವಿಷಾದನೀಯ ಸಂಗತಿ.

ಸ್ವಾತಂತ್ರ್ಯ ಹೋರಾಟಗಾರರ ಬಗೆಗೆ ರಾಜಕೀಯ ಮಾಡುವ ಕೀಳು ಮಟ್ಟಕ್ಕೆ ಇಳಿಯುವುದು ಯಾವುದೇ ದೇಶದ ಆರೋಗ್ಯಕರ ಸಮಾಜದ ಲಕ್ಷಣವಲ್ಲ. ನಿಜಕ್ಕೂ ಸಮಾಜ ಅತ್ಯಂತ ಗೌರವಯುತವಾಗಿ ನಡೆಸಿಕೊಳ್ಳಬೇಕಾದ ಮಹನೀಯರನ್ನ ಹೀಗೆ ವಿವಾದಕ್ಕೆ ಎಡೆ ಮಾಡಿಕೊಟ್ಟಿರುವುದು ಖೇದಕರ. ಯಾವುದೇ ದೇಶದ ಸ್ವಾತಂತ್ರ್ಯ ಹೋರಾಟಗಾರರಿಗೂ ಈ ರೀತಿಯ ಪರಿಸ್ಥಿತಿ ಬರಬಾರದು. ಇನ್ನು ಸಮಾಜವಾಗಿ ನಾವು ಅವರನ್ನು ನಡೆಸಿಕೊಳ್ಳುತ್ತಿರುವ ರೀತಿ ನಿಜಕ್ಕೂ ಖಂಡನೀಯವೇ ಸರಿ.

## ಸಂಸ್ಮರಣೆ

# ಲತಾ ಮಂಗೇಶ್ಕರ್ (28 ಸೆಪ್ಟೆಂಬರ್ 1929 – 6 ಫೆಬ್ರವರಿ 2022)

ಭಾರತ ಸಂಗೀತ ಲೋಕದ ದಂತಕಥೆ, ಗಾಯಕಿ ಲತಾ ಮಂಗೇಶ್ಕರ್ ಅವರು ಸಾವಿರಕ್ಕೂ ಹೆಚ್ಚು ಹಿಂದಿ ಚಲನಚಿತ್ರಗಳಲ್ಲಿ ಹಾಡುಗಳನ್ನು ಹಾಡಿದ್ದಾರೆ. ಭಾರತದ ಅತ್ಯಂತ ಪ್ರಸಿದ್ಧ ಮತ್ತು ಗೌರವಾನ್ವಿತ ಹಿನ್ನೆಲೆ ಗಾಯಕರಲ್ಲಿ ಒಬ್ಬರು. ಮಧುರವಾದ ಮತ್ತು ಆಕರ್ಷಕವಾದ ಧ್ವನಿಯೇ ಅವರ ಜನಪ್ರಿಯತೆಗೆ ಕಾರಣ.

13ನೇ ವಯಸ್ಸಿನ ಬಾಲಕಿಯಾಗಿದ್ದಾಗ ಲತಾ ಮಂಗೇಶ್ಕರ್ ಅವರು 1942ರಲ್ಲಿ ಹಾಡಲು ಪ್ರಾರಂಭಿಸಿದರು. ಭಾರತೀಯ ಭಾಷೆಗಳಲ್ಲಿ 30,000ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಅವರು ಭಾರತೀಯ ಚಿತ್ರರಂಗದ ಶ್ರೇಷ್ಠ ಗಾಯಕರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ. 2001ರಲ್ಲಿ ಭಾರತದ ಅತ್ಯುನ್ನತ ನಾಗರಿಕ ಗೌರವವಾದ 'ಭಾರತ ರತ್ನ'ವನ್ನು ಪಡೆದರು.

ಲತಾ ಮಂಗೇಶ್ಕರ್ ಅವರು 28 ಸೆಪ್ಟೆಂಬರ್ 1929ರಂದು ಮಧ್ಯಪ್ರದೇಶದ ಇಂದೋರ್‌ನಲ್ಲಿ ಜನಿಸಿದರು. ಐದು ಮಂದಿ ಒಡಹುಟ್ಟಿದವರಲ್ಲಿ ಹಿರಿಯರು. ತಂದೆ ಪಂಡಿತ್ ದೀನನಾಥ್ ಮಂಗೇಶ್ಕರ್ ಮತ್ತು ತಾಯಿ ಸೇವಂತಿ ಮಂಗೇಶ್ಕರ್. ಅವರ ತಂದೆ ಪ್ರಸಿದ್ಧ ಮರಾಠಿ ರಂಗಭೂಮಿ ಕಲಾವಿದ. ಮಾಸ್ಟರ್ ದೀನಾನಾಥ್ ಎಂದು ಕರೆಯಲ್ಪಡುತ್ತಿದ್ದರು. 13ನೇ ವಯಸ್ಸಿನಲ್ಲಿ ವಸಂತ ಜೋಗ್ಲೇಕರ್ ಅವರ ಮರಾಠಿ ಚಲನಚಿತ್ರ 'ಕಿತಿ ಹಸಾಲ್'ಗಾಗಿ ಹಾಡಲು ಆರಂಭಿಸಿದರು. ಲತಾ ಮಂಗೇಶ್ಕರ್ ಮೂಲ ಹೆಸರು "ಹೇಮಾ". ತಂದೆ ದೀನನಾಥ್ ತಮ್ಮ ಭಾವಬಂಧನ್ ಎಂಬ ನಾಟಕದಲ್ಲಿನ ಲತಾ ಎಂಬ ಪಾತ್ರಧಾರಿಯ ಹೆಸರನ್ನು ಮಗಳಿಗೆ ಇಟ್ಟರು. ಇವರ ಒಡಹುಟ್ಟಿದವರ ಹೆಸರುಗಳು ಮೀನಾ, ಆಶಾ, ಉಷಾ ಮತ್ತು ಹೃದಯನಾಥ್. ಎಲ್ಲರೂ ನಿಪುಣ ಗಾಯಕರು ಮತ್ತು ಸಂಗೀತಗಾರರು.

ಲತಾ ಅವರು ತನ್ನ ಮೊದಲ ಸಂಗೀತ ಪಾಠವನ್ನು ತಂದೆಯಿಂದಲೇ ಪಡೆದಿದ್ದರು. ಐದು ವರ್ಷದವಳಿದ್ದಾಗ, ತಂದೆಯ ಸಂಗೀತ ಪ್ರಧಾನ ನಾಟಕಗಳಲ್ಲಿ ಪಾತ್ರಗಳನ್ನು ಮಾಡುತ್ತಿದ್ದರಂತೆ ಲತಾ. ಆರು ದಶಕಗಳಿಗೂ ಹೆಚ್ಚು ಕಾಲದ ಅವರ ವೃತ್ತಿಜೀವನದಲ್ಲಿ, ಬಾಲಿವುಡ್ ನಟಿಯರ ನೃತ್ಯಕ್ಕೆ ತನ್ನದೇ ಧ್ವನಿ ನೀಡಿ ನಟಿಯರ ಅಭಿನಯದಲ್ಲಿಯೂ ಹಾಸುಹೊಕ್ಕಿದ್ದರು. ಅವರು ಭಾರತೀಯ ಚಲನಚಿತ್ರ ಸಂಗೀತದ ಮೇಲೆ ಅಭೂತಪೂರ್ವ ಪ್ರಭಾವವನ್ನು ಹೊಂದಿದ್ದರು ಎಂಬುದರಲ್ಲಿ ಸಂದೇಹವಿಲ್ಲ.

ಲತಾ ಮಂಗೇಶ್ಕರ್ ಅವರಿಗೆ 13 ವರ್ಷ ವಯಸ್ಸಾಗಿದ್ದಾಗ, ಅವರ ತಂದೆ 1942ರಲ್ಲಿ ಹೃದಯಾಘಾತದಿಂದ ನಿಧನರಾದರು. ಮಾಸ್ಟರ್ ವಿನಾಯಕ್ ಅಥವಾ ವಿನಾಯಕ್ ದಾಮೋದರ್ ಕರ್ನಾಟಕಿ ಎಂಬ ಹೆಸರಿನ ನವಯುಗ್ ಚಿತ್ರಪಟ ಚಲನಚಿತ್ರ ಕಂಪನಿಯ ಮಾಲೀಕರು ಅವರನ್ನು ನೋಡಿಕೊಂಡರು. ಅವರು ಮಂಗೇಶ್ಕರ್ ಕುಟುಂಬದ ಆಪ್ತರಾಗಿದ್ದರು. ಗಾಯಕಿ ಮತ್ತು ನಟಿಯಾಗಿ ವೃತ್ತಿಜೀವನವನ್ನು ಪ್ರಾರಂಭಿಸಲು ಅವರು ಲತಾಗೆ ಸಹಾಯ ಮಾಡಿದರು. ಚಿಕ್ಕವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು ಕುಟುಂಬದ ಹಿರಿಯ ಮಗಳಾಗಿ ಲತಾರ ಮೇಲೆ ಖಂಡಿತವಾಗಿಯೂ ಜವಾಬ್ದಾರಿಗಳಿದ್ದವು.

1948ರಲ್ಲಿ, ವಿನಾಯಕ್ ನಿಧನರಾದರು. ಸಂಗೀತ ನಿರ್ದೇಶಕ ಗುಲಾಮ್ ಹೈದರ್ ಅವರು ಗಾಯಕಿಯಾಗಿ ಮಾರ್ಗದರ್ಶನ ನೀಡಿದರು. ಅವರು ನಿರ್ಮಾಪಕ ಶಶಧರ್ ಮುಖರ್ಜಿ ಅವರಿಗೆ ಲತಾ ಅವರನ್ನು ಪರಿಚಯಿಸಿದರು. ಅಂದಾಜ್ (1949)ನಲ್ಲಿ "ಉಠಯೇ ಜಾ ಉಂಕೆ ಸಿತಂ" ಎಂಬ ಹಿಟ್ ಗೀತೆಯನ್ನು ಹಾಡಿದ್ದರು. ಮುಂದೆ ಬಾಲಿವುಡ್‌ನಲ್ಲಿ ನರ್ಗೀಸ್ ಮತ್ತು ವಹೀದಾ ರೆಹಮಾನ್‌ನಿಂದ ಹಿಡಿದು ಮಾಧುರಿ ದೀಕ್ಷಿತ್ ಮತ್ತು ಪ್ರೀತಿ ಜಿಂಟಾವರೆಗೆ ಹಿಂದಿ ಚಿತ್ರರಂಗದ ಪ್ರತಿ ಪೀಳಿಗೆಯನ್ನು ಪ್ರತಿನಿಧಿಸುವ ಪ್ರತಿಯೊಬ್ಬ ಪ್ರಮುಖ ನಾಯಕಿಗೆ ತಮ್ಮ ಸಂಗೀತದ ಧ್ವನಿಯನ್ನು ನೀಡಿದರು.

ಅವರು ತಮ್ಮ ವೃತ್ತಿ ಜೀವನದಲ್ಲಿ ಅನೇಕ ಫಿಲ್ಮ್ ಫೇರ್ ಪ್ರಶಸ್ತಿಗಳನ್ನೂ ಪಡೆದರು. ಮಧುಮತಿ (1958) ಚಿತ್ರದ ಸಲೀಲ್ ಚೌಧರಿ ಅವರ ಸಂಯೋಜನೆಯ "ಆಜಾ ರೇ ಪರದೇಸಿ"ಗಾಗಿ ಅವರು ಅತ್ಯುತ್ತಮ ಮಹಿಳಾ ಹಿನ್ನೆಲೆ ಗಾಯಕಿಗಾಗಿ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ಗೆದ್ದರು. ಬಾಗಿ (1953), ರೈಲ್ವೇ ಪ್ಲಾಟ್‌ಫಾರ್ಮ್ (1955), ಪಾಕೆಟ್ಮಾರ್ (1956), ಮಿ. ಲಂಬು (1956), ದೇಖ್ ಕಬೀರಾ ರೋಯಾ (1957), ಅದಾಲತ್ (1958), ಜೈಲರ್ (1958), ಮೊಹರ್ (1959) ಮತ್ತು ಚಾಚಾ ಜಿಂದಾಬಾದ್ (1959) ಗೀತೆಗಳಿಗೆ ಹಾಡಿದರು.

1961ರಲ್ಲಿ ಲತಾ ಮಂಗೇಶ್ಕರ್ ಅವರು ಬರ್ಮನ್ ಅವರ ಸಹಾಯಕ ಜೈದೇವ್ ಅವರ "ಅಲ್ಲಾ ತೇರೋ ನಾಮ್" ಮತ್ತು "ಪ್ರಭು ತೇರೋ ನಾಮ್" ಎಂಬ ಎರಡು ಜನಪ್ರಿಯ ಭಜನೆಗಳನ್ನು ರೆಕಾರ್ಡ್ ಮಾಡಿದರು. ಹೇಮಂತ್ ಕುಮಾರ್ ಸಂಯೋಜಿಸಿದ ಬೀಸ್ ಸಾಲ್ ಬಾದ್‌ನ "ಕಹಿನ್ ದೀಪ್ ಜಲೇ ಕಹಿನ್ ದಿಲ್" ಹಾಡಿಗೆ 1962ರಲ್ಲಿ ಅವರಿಗೆ ಎರಡನೇ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ನೀಡಲಾಯಿತು.

ಜನವರಿ 1963ರಲ್ಲಿ ನಡೆದ ಭಾರತ-ಚೀನಾ ಯುದ್ಧದಲ್ಲಿ ಮಡಿದ ಸೈನಿಕರಿಗೆ ಶ್ರದ್ಧಾಂಜಲಿ ಅರ್ಪಿಸುವ ಹಿನ್ನೆಲೆಯಲ್ಲಿ ಲತಾ ಮಂಗೇಶ್ಕರ್ ಅವರು ದೇಶಭಕ್ತಿಯ ಗೀತೆಯನ್ನು ಹಾಡಿದರು. ಆಗ ಭಾರತದ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರು ಅವರ ಸಮ್ಮುಖದಲ್ಲಿ "ಏ ಮೇರೆ ವತನ್ ಕೆ ಲೋಗೋ" ಹಾಡಿದ್ದರು. ಈ ಹಾಡು ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ಕಣ್ಣೀರು ತರಿಸಿತು. ಈ ಹಾಡನ್ನು ಸಿ.ರಾಮಚಂದ್ರ ಅವರು ಸಂಯೋಜಿಸಿದ್ದು, ಕವಿ ಪ್ರದೀಪ್ ಬರೆದಿದ್ದಾರೆ.

ಪರಿಚಯ ಚಿತ್ರದ "ಬೀಟಿ ನಾ ಬಿಟೈ" ಹಾಡಿಗಾಗಿ ಅವರು 1973ರಲ್ಲಿ ಮೊದಲ ಬಾರಿಗೆ ಅತ್ಯುತ್ತಮ ಮಹಿಳಾ ಹಿನ್ನೆಲೆ ಗಾಯಕಿಗಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಗೆದ್ದರು. ಇದನ್ನು ಆರ್.ಡಿ ಬರ್ಮನ್ ಸಂಯೋಜಿಸಿ, ಗುಲ್ಜಾರ್ ಬರೆದಿದ್ದಾರೆ.

12 ಏಪ್ರಿಲ್ 2011ರಂದು 'Sarhadein: Music Beyond Boundaries' ಎಂಬ ಆಲ್ಬಂ ಅನ್ನು ಬಿಡುಗಡೆ ಮಾಡಿದರು. ಇದು ಮಂಗೇಶ್ಕರ್ ಮತ್ತು ಮೆಹದಿ ಹಸನ್ ಅವರ ಡ್ಯುಯೆಟ್ 'ತೇರಾ ಮಿಲ್ನಾ ಬಹುತ್ ಅಚ್ಚಾ ಲಗೇ' ಅನ್ನುವ ಹಾಡನ್ನು ಒಳಗೊಂಡಿದೆ. ಅವರು ಬೆವಫಾ (2005) ಗಾಗಿ ಸಂಯೋಜಕ ನದೀಮ್-ಶ್ರವಣ್ "ಕೈಸೆ ಪಿಯಾ ಸೆ" ಗಾಗಿ ಹಾಡನ್ನು ರೆಕಾರ್ಡ್ ಮಾಡಿದ್ದಾರೆ. ಶಮೀರ್ ಟಂಡನ್ ಅವರು ಸತ್ರಾಂಗೀ ಪ್ಯಾರಾಚೂಟ್ (2011) ಚಿತ್ರಕ್ಕಾಗಿ ಅವರ "ತೇರೆ ಹಸ್ನೆ ಸಾಯಿ ಮುಜಕೊ" ಹಾಡನ್ನು ಕೂಡ ರೆಕಾರ್ಡ್ ಮಾಡಿದ್ದಾರೆ.

ಎಂದಿಗೂ ಪ್ರಶಸ್ತಿಗಾಗಿ ಹಾಡದ ಲತಾ ದೀದಿ ಅತ್ಯಂತ ಸರಳವಾದ ಜೀವನದ ಮೂಲಕ ಎಲ್ಲರ ಮನಕ್ಕೆ ಹತ್ತಿರವಾದವರು.



ಆದರೂ ಲತಾ ಅವರ ದನಿಯನ್ನು ಹುಡುಕಿಕೊಂಡು ಅನೇಕ ಪ್ರಶಸ್ತಿ, ಸನ್ಮಾನಗಳು ಬಂದಿವೆ. 2009ರಲ್ಲಿ ANR ರಾಷ್ಟ್ರೀಯ ಪ್ರಶಸ್ತಿ, 2007 – ಲೀಜನ್ ಆಫ್ ಆನರ್, 2001 – ಭಾರತ ರತ್ನ 1999 – ಪದ್ಮವಿಭೂಷಣ, 1999 – ಜೀವಮಾನದ ಸಾಧನೆಗಳಿಗಾಗಿ ಝೀ ಸಿನಿ ಪ್ರಶಸ್ತಿ, 1999 – NTR ರಾಷ್ಟ್ರೀಯ ಪ್ರಶಸ್ತಿ, 1997 – ಮಹಾರಾಷ್ಟ್ರ ಭೂಷಣ ಪ್ರಶಸ್ತಿ, 1989 – ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ, 1972, 1974, ಮತ್ತು 1990 – ಮೂರು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು, 15 ಬಂಗಾಳ ಚಲನಚಿತ್ರ ಪತ್ರಕರ್ತರ ಸಂಘದ ಪ್ರಶಸ್ತಿಗಳು, 1959, 1963, 1966, ಮತ್ತು 1970 – ನಾಲ್ಕು ಫಿಲ್ಮ್‌ಫೇರ್ ಅತ್ಯುತ್ತಮ ಮಹಿಳಾ ಪ್ರಶಸ್ತಿಗಳು, 1993 – ಫಿಲ್ಮ್‌ಫೇರ್ ಜೀವಮಾನ ಸಾಧನೆ ಪ್ರಶಸ್ತಿ, 1994 ಮತ್ತು 2004 – ಫಿಲ್ಮ್‌ಫೇರ್ ವಿಶೇಷ ಪ್ರಶಸ್ತಿಗಳು, 1984 – ಮಧ್ಯಪ್ರದೇಶದ ರಾಜ್ಯ ಸರ್ಕಾರವು ಲತಾ ಮಂಗೇಶ್ಕರ್ ಅವರ ಹೆಸರಿನಲ್ಲಿ ಲತಾ ಮಂಗೇಶ್ಕರ್ ಪ್ರಶಸ್ತಿಯನ್ನು ಸ್ಥಾಪಿಸಿತು. 1992 – ಮಹಾರಾಷ್ಟ್ರ ರಾಜ್ಯ ಸರ್ಕಾರವು ಲತಾ ಮಂಗೇಶ್ಕರ್ ಪ್ರಶಸ್ತಿಯನ್ನು ಸಹ ಸ್ಥಾಪಿಸಿತು

## ಎಲ್ಲೋ ಕೇಳಿದ ಕಥೆ

ಒಬ್ಬ ವ್ಯಕ್ತಿ ವಯಸ್ಸಾದ ಮಹಿಳೆಯಿಂದ ಯಾವಾಗಲೂ ಕಿತ್ತಳೆ ಹಣ್ಣುಗಳನ್ನು ಖರೀದಿಸುತ್ತಿದ್ದ. ದುಡ್ಡು ಕೊಟ್ಟು ತೂಕಮಾಡಿದ ಕಿತ್ತಳೆ ಹಣ್ಣುಗಳನ್ನು ಚೀಲದೊಳಗೆ ಹಾಕಿದ ನಂತರ ಅದರಿಂದ ಒಂದನ್ನು ತೆಗೆದು ಸುಲಿದು ಒಂದು ಎಸಳನ್ನು ತಿಂದು, "ಇದು ಹುಳಿಯಾಗಿದೆ" ಅಂತ ಆ ಕಿತ್ತಳೆ ಹಣ್ಣನ್ನು ಆ ಮಹಿಳೆಗೆ ಕೊಡುತ್ತಿದ್ದ. ಆಕೆ ಅದನ್ನು ತಿಂದು "ಇದು ಸಿಹಿಯಾಗಿದೆಯಲ್ಲಾ..." ಅನ್ನುವಷ್ಟರಲ್ಲಿ ಆತ ಹೊರಟು ಹೋಗಿರುತ್ತಿದ್ದ.

ಇದು ಪ್ರತಿದಿನ ನಡೆಯುತ್ತಿತ್ತು. ಆತನ ಪತ್ನಿಯು ಕೇಳುತ್ತಾಳೆ – "ಕಿತ್ತಳೆ ಹಣ್ಣುಗಳು ಸಿಹಿಯಾಗಿದ್ದರೂ, ನೀವು ಯಾಕೆ ಈ ರೀತಿ ಸುಳ್ಳು ಹೇಳುತ್ತೀರಾ?"



ಆತ ನಗುತ್ತಾ ಹೇಳುತ್ತಾನೆ – "ಆ ಮಹಿಳೆ ಸಿಹಿಯಾದ ಕಿತ್ತಳೆ ಹಣ್ಣುಗಳನ್ನು ಮಾರುತ್ತಿದ್ದರೂ ಒಂದನ್ನೂ ಕೂಡಾ ತಿನ್ನುವುದಿಲ್ಲ. ನಾನು ಹೀಗೆ ಮಾಡುವುದರಿಂದ ಆಕೆಯು ಹಣವಿಲ್ಲದೇ ಅಥವಾ ನಷ್ಟವಿಲ್ಲದೆ ಒಂದು ಕಿತ್ತಳೆ ಹಣ್ಣನ್ನು ತಿನ್ನಬಹುದಲ್ಲಾ?"

ಪ್ರತಿ ದಿನವೂ ಆ ಅಂಗಡಿಯ ದೃಶ್ಯವನ್ನು ನೋಡುತ್ತಿದ್ದ ಪಕ್ಕದ ಅಂಗಡಿಯಾಕೆ ಆ ವಯಸ್ಸಾದ ಮಹಿಳೆಯನ್ನ ಕೇಳುತ್ತಾಳೆ – "ಆತ ಪ್ರತಿದಿನ ನಿಮ್ಮ ಕಿತ್ತಳೆ ಹಣ್ಣು ಹುಳಿಯಾಗಿದೆ ಅಂತ ದೂರುತ್ತಿದ್ದರೂ ತೂಕದಲ್ಲಿ ಏಕೆ ಒಂದನ್ನು ಹೆಚ್ಚು ಕೊಡುತ್ತಿದ್ದೀರಾ?"

ಅದಕ್ಕೆ ಆ ವಯಸ್ಸಾದ ಮಹಿಳೆ ನಗುತ್ತಾ ಹೇಳುತ್ತಾಳೆ – "ನನಗೆ ಗೊತ್ತು ಆತ ಕಿತ್ತಳೆ ಹಣ್ಣನ್ನು ದೂರುತ್ತಾ ಒಂದು ಕಿತ್ತಳೆ ಹಣ್ಣನ್ನು ಕೊಡುತ್ತಿರುವುದು ನನಗೆ ತಿನ್ನೋಕೆ ಅಂತ. ಆದರೆ ಆ ವಿಷಯ ನನಗೆ ಗೊತ್ತಿದೆ ಅಂತ ಆತನಿಗೆ ಗೊತ್ತಿಲ್ಲ....! ಆದ್ದರಿಂದಲೇ ತೂಕದಲ್ಲಿ ನಾನು ಒಂದು ಕಿತ್ತಳೆ ಹಣ್ಣನ್ನು ಹೆಚ್ಚಾಗಿ ಕೊಡುತ್ತಿರುವುದು ...!"

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ

## ಶಿವರಾಮು ಶ್ರೇಷ್ಠ ಕವಿಗಳಲ್ಲೊಬ್ಬರು – ಡಾ. ಜಿ.ಬಿ. ಹರೀಶ್ ಬಣ್ಣನೆ

'ಕನ್ನಡ ಸಾಹಿತ್ಯದಲ್ಲಿ ಗೋಪಾಲಕೃಷ್ಣ ಅಡಿಗರ ನಂತರದ ಶ್ರೇಷ್ಠ ಮತ್ತು ದೊಡ್ಡ ಕವಿಗಳಲ್ಲಿ ಶಿವರಾಮು ಅವರಾಗಿದ್ದಾರೆ' ಎಂದು ಇತಿಹಾಸ ತಜ್ಞ ಮತ್ತು ಸಾವರ್ಕರ್ ಸಾಹಿತ್ಯ ಸಂಘದ ಅಧ್ಯಕ್ಷರಾದ ಡಾ. ಜಿ.ಬಿ. ಹರೀಶ್ ಅಭಿಪ್ರಾಯಪಟ್ಟರು.

ನಗರದ ಪುರವಂಕರ ಸುಚಿತ್ರಾ ಸಭಾಂಗಣದಲ್ಲಿ ಸಾವರ್ಕರ್ ಸಾಹಿತ್ಯ ಸಂಘದ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ 'ಸಮಕಾಲೀನ ಹಿಂದು ಸಾಹಿತ್ಯ ಒಂದು ಅವಲೋಕನ ಮತ್ತು ವೀರ ಸಾವರ್ಕರ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು'. ಸಾಹಿತ್ಯದ ಪ್ರಖರ ದೀಪವಾಗಿದ್ದ ಶಿವರಾಮು ಅವರು ಕವಿತ್ವವನ್ನು ಬಸಿದು 'ಆತ್ಮಾಹುತಿ' ಕೃತಿಯನ್ನು ಗದ್ಯರೂಪದಲ್ಲಿ ಕೊಟ್ಟಿದ್ದಾರೆ. ಅವರ ಕವನಗಳನ್ನು ಸಂಘದ ಶಾಖೆಗಳಲ್ಲಿ, ಫುಟ್ ಬಾಲ್ ಮೈದಾನದಲ್ಲಿ ಹಾಡುವುದಲ್ಲದೆ, ಲಕ್ಷ ಲಕ್ಷ ಜನರನ್ನು ಸೇರಿಸಿ ಅವರ ಕವನಗಳ ವಾಚನ ಮಾಡಬೇಕು. ಆಗ ಅಲ್ಲಿ ಸೇರಿದವರೆಲ್ಲ ಗದ್ಗದಿತರಾಗಿ ಕಣ್ಣು ತುಂಬಿಕೊಂಡು ಮನೆಗೆ ಹೋಗುತ್ತಾರೆ. ಅಂತಹ ಶಕ್ತಿ ಶಿವರಾಮು ಅವರ ಕವನಗಳಲ್ಲಿವೆ ಎಂದರು.

ಸಾಹಿತಿ ಡಾ. ಬಾಬು ಕೃಷ್ಣಮೂರ್ತಿ ಮಾತನಾಡಿ, 'ರಾಜ್ಯದಲ್ಲಿ ಶಿವರಾಮು ಅವರು ದೇಶಭಕ್ತಿಗಳನ್ನು ಬರೆಯುವುದಕ್ಕೆ ತಮ್ಮ ಸರ್ವಸ್ವವನ್ನೂ ಅರ್ಪಿಸಿದ್ದಾರೆ. ಅವರ ಕವನಗಳನ್ನು ಹಾಡುತ್ತಿದ್ದರೆ ಭಾರತದ ಶ್ರೇಷ್ಠತೆ ಕಣ್ಣಮುಂದೆ ಬರುತ್ತದೆ. ಬರವಣಿಗೆಯ ಮೂಲಕ ಉಪದೇಶ ಮಾಡದೇ ದೇಶದ ಲಕ್ಷಾಂತರ ಯುವಕರಲ್ಲಿ ದೇಶಭಕ್ತಿಯ ಚಿಲುಮೆ ಚಿಮ್ಮುವಂತೆ ಮಾಡಿದ್ದಾರೆ' ಎಂದರು.

ಸಾವರ್ಕರ್ ಸಾಹಿತ್ಯ ಸಂಘವು ದಿ. ಶಿವರಾಮು ಅವರಿಗೆ ಘೋಷಿಸಿದ ವೀರ ಸಾವರ್ಕರ್ ರಾಷ್ಟ್ರೀಯ ಪ್ರಶಸ್ತಿಯನ್ನು ಅವರ ಪತ್ನಿ ಶಾರದಾ ಶಿವರಾಮು ಅವರಿಗೆ ಪ್ರದಾನ ಮಾಡಲಾಯಿತು.



ಪತ್ನಿ ಶಾರದಾ ಶಿವರಾಮು ಅವರಿಗೆ ಪ್ರದಾನ ಮಾಡಲಾಯಿತು. ಬಾಬು ಕೃಷ್ಣಮೂರ್ತಿ, ಜಿ.ಬಿ. ಹರೀಶ್, ಎಸ್.ಆರ್. ಲೀಲಾ, ಹರ್ಷ ಸಮೃದ್ಧ ಇತರರು ಉಪಸ್ಥಿತರಿದ್ದರು.

ದಿ. ಶಿವರಾಮು ಅವರಿಗೆ ನೀಡುವ ವೀರ ಸಾವರ್ಕರ್ ರಾಷ್ಟ್ರೀಯ ಪ್ರಶಸ್ತಿಯನ್ನು ಪತ್ನಿ ಶಾರದಾ ಶಿವರಾಮು ಅವರಿಗೆ ನೀಡಲಾಯಿತು. ಸಾಹಿತಿ ಡಾ. ಬಾಬು ಕೃಷ್ಣಮೂರ್ತಿ, ವಾಗ್ದೇವಿ ವಿಲಾಸ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ. ಹರೀಶ್, ವಿಧಾನಪರಿಷತ್ ಮಾಜಿ ಸದಸ್ಯೆ ಎಸ್.ಆರ್ ಲೀಲಾ, ಸಾವರ್ಕರ್ ಸಾಹಿತ್ಯ ಸಂಘದ ಟ್ರಸ್ಟಿ ಹರ್ಷ ಸಮೃದ್ಧ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

## ವಸಾಹತುಶಾಹಿ ಪ್ರಜ್ಞೆಯಿಂದ ಹೊರಬರಬೇಕಿದೆ – ಜೆ. ನಂದಕುಮಾರ್

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಸಭಾಂಗಣದಲ್ಲಿ ಗುರುವಾರ ಪ್ರಜ್ಞಾ ಪ್ರವಾಹ, ಬೆಂಗಳೂರಿನ ವತಿಯಿಂದ 'ಲೋಕ್, ಬಿಯಾಂಡ್ ಫೋಕ್' ಪುಸ್ತಕವು ಲೋಕಾರ್ಪಣೆಗೊಂಡಿತು. ಪ್ರಜ್ಞಾ ಪ್ರವಾಹದ ರಾಷ್ಟ್ರೀಯ ಸಂಯೋಜಕರಾದ ಜೆ. ನಂದಕುಮಾರ್‌ರವರು ಈ ಪುಸ್ತಕವನ್ನು ಸಂಪಾದಿಸಿದ್ದಾರೆ.

"ಫೋಕ್ ಅನ್ನುವುದನ್ನು ಜಾನಪದ ಎಂದು ಅನುವಾದ ಮಾಡಲಾಗುವುದಿಲ್ಲ. ಲೋಕ ಅಥವಾ ಜಾನಪದ ಎನ್ನುವುದು ಬಹಳ ವಿಶಾಲ ಅರ್ಥ ಹೊಂದಿದೆ. ಅದನ್ನು ಫೋಕ್ ಎನ್ನುವ ಪದದಲ್ಲಿ ಕಟ್ಟಿಕೊಡುವುದು ಅಸಾಧ್ಯ. ಎಲ್ಲ ಭಾರತೀಯ ಭಾಷೆಗಳನ್ನು ಇಂಗ್ಲೀಷಿಗೆ ಅನುವಾದ ಮಾಡುವುದು ಸಾಧ್ಯವಿಲ್ಲ, ಅದು ತರವೂ ಅಲ್ಲ. ಉದಾಹರಣೆಗೆ ಧರ್ಮ ಎನ್ನುವುದನ್ನು ಅನುವಾದ ಮಾಡಲು ಸಾಧ್ಯವೇ?" ಎಂದರು.

ಅವರು ಮುಂದುವರೆದು ಮಾತನಾಡುತ್ತಾ "ಫೋಕ್ ಎನ್ನುವುದು ಕಲ್ಚರಲ್ ಮಾರ್ಕ್ಸಿಯನ್ ಟರ್ಮ್, ಅದರ ಯೂರೋಪಿನಲ್ಲಿ ಹುಟ್ಟನ್ನು ಗಮನಿಸಿದಾಗ ಅಳಕ್ಕೆ ತಿಳಿಯಬಹುದು. ಜರ್ಮನ್ ಭಾಷೆಯಲ್ಲಿರುವ ವೋಕ್‌ನ ಅರ್ಥ ನೇಷನ್. ಆದರೆ ಭಾರತದಲ್ಲಿ ಈ ಫೋಕ್ ಎನ್ನುವ ಪರಿಭಾಷೆಯನ್ನು ನೀಡಿ ವಸಾಹತುಸಾಹಿಗಳು ನಮ್ಮನ್ನು ಜಾನಪದ ಸಂಸ್ಕೃತಿಯಿಂದ ಒಡೆಯಲು ಭಾಗ ಮಾಡಿದರು. ನಮ್ಮ ಲೋಕ ಎನ್ನುವ ವಿಚಾರ ಫೋಕ್‌ಗಿಂತಲೂ ವಿಸ್ತಾರವಾದುದು."




"ಲೋಕ್ ಅಥವಾ ಜಾನಪದ ಎನ್ನುವುದಕ್ಕೆ ಯಾವುದೇ ಜಾತಿ, ಮತ, ಪಂಥ, ಸ್ಥಳಗಳ ಹಂಗು ಇಲ್ಲ. ಯಾರು ಯಾವುದೇ ಪುಸ್ತಕಕ್ಕೆ ತೊಡಗಿಸಿಕೊಳ್ಳದೇ ಬದುಕುತ್ತಾರೋ ಅವರು ಜಾನಪದರು ಎಂದು ಹಿರಿಯ ಜಾನಪದ ಚಿಂತಕ ಹರಿಪ್ರಸಾದ್ ದ್ವಿವೇದಿ ಹೇಳುತ್ತಾರೆ. ಜಾನಪದರು ನಿಜವಾದ ಸಂಸ್ಕೃತಿಯ ಅಡಿಪಾಯ.ಇವರನ್ನು ಬರೀ ಫೋಕ್ ಎಂದು ಕರೆದರೆ ಇದೊಂದು ರೀತಿ ಭಾರತವನ್ನು ಇಂಡಿಯಾ ಎಂದು ಕರೆದಂತೆ. ಅದರಲ್ಲಿ ಸತ್ವ ಉಳಿಯುವುದಿಲ್ಲ."

"ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸ್ವಾತಂತ್ರ್ಯ ದಿನದಂದು ಪಂಚ ಪ್ರಾಣಗಳ ಕುರಿತು ಮಾತನಾಡಿದರು. ಅದರಲ್ಲಿ ಎರಡನೆಯದರ ಮೇಲೆ ಗಮನ ಸೆಳೆಯಲು ಬಯಸುತ್ತೇನೆ. ನಾವು ಭಾರತದಲ್ಲಿ, ನಮ್ಮೊಳಗೆ ಉಳಿದಿರುವ ಗುಲಾಮೀತನದ ವಸಾಹತುಶಾಹಿ ಮಾನಸಿಕತೆಯ ಸಣ್ಣ ಅಂಶವನ್ನು ಹೊರಗೋಡಿಸಬೇಕು. ಭಾರತವನ್ನು ಭಾರತವನ್ನಾಗಿ ರೂಪಿಸಲು ಇಂಗ್ಲೆಂಡ್ ನಮ್ಮ ವಿಚಾರಗಳಲ್ಲಿ ಇದ್ದರೆ ಸಾಧ್ಯವಿಲ್ಲ, ಹಾಗಾದರೆ ಇಂಡಿಯಾ ಸಮೃದ್ಧವಾಗಬಹುದು, ಆದರೆ ಭಾರತ ಸಮೃದ್ಧವಾಗಲು ಸಾಧ್ಯವಿಲ್ಲ. ಆದ್ದರಿಂದ ವಸಾಹತುಶಾಹಿ ಪ್ರಜ್ಞೆಯ ಲವಲೇಶವೂ ಉಳಿಯದಂತೆ ಕಳಚಬೇಕಿದೆ."

"ವಸಾಹತುಶಾಹಿ ಪ್ರಜ್ಞೆ ನಮ್ಮೊಳಗೆ ಜಾಗೃತವಾದರೆ ಏನಾಗುತ್ತದೆ? ನಮ್ಮೊಳಗೆ ಅತ್ಯಂತ ಅಪಾಯಕಾರಿಯಾದ 6 'ಐ'ಗಳು ಬಂದುಬಿಡುತ್ತದೆ. ಮೊದಲನೆಯದಾಗಿ ನಾವು 'insensible' ಆಗಿಬಿಡುತ್ತೇವೆ. ಜೊತೆಗೆ ನಾವು 'Ignorant' ನಾವು ಅಜ್ಞಾನದ ದಾಸರಾಗಿ ಬಿಡುತ್ತೇವೆ. ಮೂರನೆಯದಾಗಿ ನಾವು ಭಾರತದ ಎಲ್ಲ ವಿಚಾರಗಳ ಕುರಿತು 'irrelevant' ಆಗಿಬಿಡುತ್ತೇವೆ. ನಾಲ್ಕನೆಯದು ನಾವು ಭಾರತದ ಕುರಿತು 'Illwilled'ಗಳಾಗಿ ಬಿಡುತ್ತೇವೆ. ಇದೆಲ್ಲದರ ಪರಿಣಾಮವಾಗಿ ನಮ್ಮೊಳಗೊಂದು ನಿಷ್ಕ್ರಿಯತೆ 'inaction' ಆರಂಭವಾಗುತ್ತದೆ. ಅದರ ಪರಿಣಾಮ ಸ್ವರೂಪವಾಗಿ ನಾವು 'incompetent' ನಿರ್ಬಲರೂ ಆಗಿ ಉಳಿದು ಬಿಡುತ್ತೇವೆ. ಹಾಗಾಗಿ ವಸಾಹತುಶಾಹಿ ಪ್ರಜ್ಞೆಯಿಂದ, ಆಕ್ರಮಣಕಾರರ ಪ್ರಭಾವದಿಂದ ಹೊರಬರಬೇಕಿದೆ." ಎಂದು ಕರೆ ನೀಡಿದರು.

ಪುಸ್ತಕವನ್ನು ಕುರಿತು ಮಹಾದೇವಯ್ಯ ಅವರು ಪರಿಚಯ ಮಾಡಿಕೊಟ್ಟರು. ಜಾನಪದ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಭಾಸ್ಕರನ್, ಸಂಸ್ಕಾರ ಭಾರತಿಯ ರಾಜ್ಯ ಕಾರ್ಯದರ್ಶಿಗಳಾದ ಗುಬ್ಬಿಗೂಡು ರಮೇಶ್ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಹಿರಿಯ ಜಾನಪದ ಕಲಾವಿದರಾದ ಅಪ್ಪಗೆರೆ ತಿಮ್ಮರಾಜು, ಪ್ರಜ್ಞಾ ಪ್ರವಾಹದ ಕ್ಷೇತ್ರೀಯ ಸಂಯೋಜಕರಾದ ಶ್ರೀ ರಘುನಂದನ, ಶ್ರೀ ಪುನೀತ್ ಮುಂತಾದವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಸಾಲುದ್ದದ ಸುದ್ದಿಗಳು

## ಸೆಪ್ಟೆಂಬರ್ 10–12ರಂದು ಛತ್ತೀಸ್‌ಗಡದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮನ್ವಯ ಬೈಠಕ್



ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಪ್ರೇರಿತರಾಗಿ, ಸಾಮಾಜಿಕ ಜೀವನದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಸಂಘಟನೆಗಳ ಪ್ರಮುಖ ಪದಾಧಿಕಾರಿಗಳ ಸಮನ್ವಯ ಸಭೆಯನ್ನು ಈ ತಿಂಗಳು ಅಂದರೆ ಸೆಪ್ಟೆಂಬರ್ 10 ರಿಂದ 12, 2022ರವರೆಗೆ ಛತ್ತೀಸ್‌ಗಢದ ರಾಯ್‌ಪುರದಲ್ಲಿ ಆಯೋಜಿಸಲಾಗಿದೆ.

ಈ ಅಖಿಲ ಭಾರತ ಮಟ್ಟದ ಸಮಗ್ರ ಸಮನ್ವಯ ಸಭೆಯು ವರ್ಷಕ್ಕೊಮ್ಮೆ ನಡೆಯುತ್ತದೆ. ಪೂಜ್ಯ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್ ಮತ್ತು ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆ, ಐವರು ಸಹ ಸರಕಾರ್ಯವಾಹರು ಮತ್ತು ಸಂಘದ ಇತರ ಪ್ರಮುಖ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಭಾರತೀಯ ಮಜ್ದೂರ್ ಸಂಘದ ಶ್ರೀ ಹಿರಣ್ಮಯ್ ಪಾಂಡ್ಯ ಮತ್ತು ಶ್ರೀ ಬಿ ಸುರೇಂದ್ರನ್, ವಿಶ್ವ ಹಿಂದೂ ಪರಿಷತ್ತಿನ ಶ್ರೀ ಅಲೋಕಕುಮಾರ್ ಮತ್ತು ಶ್ರೀ ಮಿಲಿಂದ್ ಪರಾಂಡೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಶ್ರೀ ಆಶಿಶ್ ಚೌಹಾಣ್ ಮತ್ತು ನಿಧಿ ತ್ರಿಪಾಠಿ, ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಶ್ರೀ ಜೆಪಿ ನಡ್ಡಾ ಮತ್ತು ಶ್ರೀ ಬಿ.ಎಲ್. ಸಂತೋಷ್ ಮತ್ತು ಭಾರತೀಯ ಕಿಸಾನ್ ಸಂಘದ ಶ್ರೀ ದಿನೇಶ್ ಕುಲಕರ್ಣಿ, ವಿದ್ಯಾಭಾರತಿಯ ಶ್ರೀ ರಾಮಕೃಷ್ಣ ರಾವ್ ಮತ್ತು ಜಿ.ಎಂ.ಕಾಶಿಪತಿ, ರಾಷ್ಟ್ರ ಸೇವಿಕಾ ಸಮಿತಿಯ ವಂದನೀಯ ಶ್ರೀ ಶಾಂತಕ್ಕ ಮತ್ತು ಕುಮಾರಿ ಅನ್ನದಾನಂ ಸೀತಕ್ಕ, ವನವಾಸಿ ಕಲ್ಯಾಣ ಆಶ್ರಮದ ಶ್ರೀ ರಾಮಚಂದ್ರ ಖರಾಡಿ ಮತ್ತು ಶ್ರೀ ಅತುಲ್ ಜೋಗ್ ಸೇರಿದಂತೆ ಒಟ್ಟು 36 ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಕೆಲವು ಪ್ರಮುಖ ಅಧಿಕಾರಿಗಳು ಇದರಲ್ಲಿ ಭಾಗವಹಿಸಲಿದ್ದಾರೆ. ಈ ಎಲ್ಲಾ ಸಂಘಟನೆಗಳು ರಾಷ್ಟ್ರೀಯತೆಯ ಭಾವವನ್ನು ಸಮಾಜ ಜೀವನದ ವಿವಿಧ ಕ್ಷೇತ್ರಗಳಲ್ಲಿ ಸಮಾಜದ ಹಿತದೃಷ್ಟಿಯಿಂದ ಮೂಡಿಸುವಲ್ಲಿ ಸಕ್ರಿಯವಾಗಿವೆ.

ಶಿಕ್ಷಣ ಕ್ಷೇತ್ರ, ಆರ್ಥಿಕತೆ, ಸಂಘಟನೆ ಹಾಗೂ ಸೇವಾ ಕಾರ್ಯಗಳು ಮತ್ತು ವಿವಿಧ ಸಾಮಾಜಿಕ ಮತ್ತು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಷಯಗಳಲ್ಲಿ ನಿರಂತರವಾಗಿ ಈ ಸಂಘಟನೆಗಳು ಸಕ್ರಿಯವಾಗಿದ್ದು, ಈ ಸಭೆಯಲ್ಲಿ, ಪ್ರತಿ ಸಂಘಟನೆಯೂ ತಮ್ಮ ಕೆಲಸ ಮತ್ತು ಸಾಧನೆಗಳನ್ನು ವಿವರವಾಗಿ ಪ್ರಸ್ತುತ ಪಡಿಸುತ್ತಾರೆ. ಸಭೆಯ ಅನುಮತಿಯ ಮೇರೆಗೆ ಆದ್ಯತೆಗಳ ಆಧಾರದ ಮೇಲೆ ಸಂಬಂಧಿಸಿದ ಅಗತ್ಯ ಕಾರ್ಯಗಳ ಕುರಿತು ವಿಸ್ತಾರವಾದ ಚರ್ಚೆ ಮಾಡುತ್ತಾರೆ.

ಈ ರೀತಿ ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳಲ್ಲಿ ಸಕ್ರಿಯವಾಗಿರುವ ಸ್ವಯಂಸೇವಕರೊಂದಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘವು ನಿರಂತರವಾಗಿ ಸಮನ್ವಯವನ್ನು ಹೊಂದಿದ್ದು ಪರಿಸರ, ಕುಟುಂಬ ಮತ್ತು ಸಾಮಾಜಿಕ ಸಾಮರಸ್ಯದಂತಹ ವಿಷಯಗಳ ಮೇಲೆ ಸಂಘಟಿತ ಪ್ರಯತ್ನಗಳ ಅಗತ್ಯವಿದ್ದು ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಲಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತ ಪ್ರಚಾರ ಪ್ರಮುಖರಾದ ಶ್ರೀ ಸುನೀಲ್ ಅಂಬೇಕರ್ ತಿಳಿಸಿದ್ದಾರೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th SEPTEMBER 2022
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-09-2022



## CRPFನಲ್ಲಿ ಶೀಘ್ರ ಉಪಕರಣ ಸಾಗಾಣೆ ಮಾಡಲಿವೆ ಶ್ವಾನಗಳು

ದಂಗೆ ಪೀಡಿತ ಪ್ರದೇಶಗಳಲ್ಲಿ ಮತ್ತು ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳ ಸಂದರ್ಭದಲ್ಲಿ ಕೇಂದ್ರೀಯ ಮೀಸಲು ಪೊಲೀಸ್ ಪಡೆ (CRPF)ಯ ಕಾರ್ಯಾಚರಣೆ ಘಟಕಗಳು ಶೀಘ್ರದಲ್ಲೇ ದೂರದ ಕಣ್ಗಾವಲು ಮತ್ತು ಶಿಬಿರಗಳಾದ್ಯಂತ ಉಪಕರಣಗಳನ್ನು ಸಾಗಿಸಲು ಶ್ವಾನಗಳನ್ನು ಬಳಸಲಿವೆ.

ಯುಎಸ್ ವಿಶೇಷ ಪಡೆಗಳು ಮತ್ತು ಕೆನಡಾದ ವಿಶೇಷ ಪಡೆಗಳು ಮಾತ್ರ ಇದುವರೆಗೆ ಉಪಕರಣಗಳನ್ನು ಸಾಗಿಸಲು ಶ್ವಾನಗಳನ್ನು ಬಳಸುತ್ತಿದ್ದವು. ಇನ್ನು ಮುಂದೆ ಈ ಸಾಲಿಗೆ ಭಾರತದ CRPF ಕೂಡ ಸೇರ್ಪಡೆಯಾಗಲಿದೆ.

ಎಡಪಂಥೀಯ ಉಗ್ರವಾದ ಮತ್ತು ಜಮ್ಮು ಮತ್ತು ಕಾಶ್ಮೀರದ ಉಗ್ರ ಪೀಡಿತ ಪ್ರದೇಶದಲ್ಲಿ ನಿಯೋಜಿಸಲಾದ CRPFನ ಕಾರ್ಯಾಚರಣೆಯ ಘಟಕಗಳು ಐ9 ತಂಡಗಳ ನಿಬಂಧನೆಗಾಗಿ ಒತ್ತಾಯಿಸುತ್ತಿವೆ. ಸಿಆರ್‌ಪಿಎಫ್ ಕೆ9ಗಳ ವರ್ಕಿಂಗ್ ಲೈನ್ ಬ್ರೀಡಿಂಗ್ ಸ್ಟಾಕ್ ಮತ್ತು BSM (ಬೆಲ್ಜಿಯನ್ ಶೆಫರ್ಡ್ ಮಾಲಿನೋಯಿಸ್)ನ ಮರಿಗಳನ್ನು ಖರೀದಿಸುವ ಪ್ರಕ್ರಿಯೆಯಲ್ಲಿದೆ.



## ವೋಟ್ ಬ್ಯಾಂಕ್ ರಾಜಕೀಯದಿಂದ ಹಿಂದೆ ಭಾರತ ಇಸ್ರೇಲ್ ಜೊತೆ ಬಾಂಧವ್ಯ ಬೆಳೆಸಿರಲಿಲ್ಲ: ಜೈ ಶಂಕರ್



"ವೋಟ್ ಬ್ಯಾಂಕ್ ರಾಜಕೀಯದಿಂದಾಗಿ ಇಸ್ರೇಲ್ ಜೊತೆಗಿನ ಬಾಂಧವ್ಯ ವೃದ್ಧಿಯಿಂದ ಭಾರತ ಹಿಂದೆ ದೂರ ಉಳಿದಿತ್ತು" ಎಂದು ಕೇಂದ್ರ ವಿದೇಶಾಂಗ ಸಚಿವ ಜೈಶಂಕರ್ ಹೇಳಿದ್ದಾರೆ. "ಪ್ರಧಾನಿ ನರೇಂದ್ರ ಮೋದಿ ಅವರ ನಿರ್ದೇಶನದಲ್ಲಿ ವಿಕಸನಗೊಂಡ ವಿದೇಶಾಂಗ ನೀತಿಯನ್ನು ಶ್ಲಾಘಿಸಿದ ಅವರು, ಮೋದಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ಸದಾ ಮೇಲ್ಮಟ್ಟದಲ್ಲಿ ಇಡುತ್ತಾರೆ" ಎಂದು ಹೇಳಿದರು.

ಭಾರತವು ಇಸ್ರೇಲ್‌ನಿಂದ ದೊಡ್ಡ ಪ್ರಯೋಜನಗಳನ್ನು ಹೊಂದಿದ್ದರೂ ಸಹ 'ಕೆಲವು ರಾಜಕೀಯ ಕಾರಣಗಳಿಂದಾಗಿ' ಸಂಬಂಧವನ್ನು ಹೆಚ್ಚಿಸುವುದರಿಂದ ದೂರ ಉಳಿಯಲಾಗಿತ್ತು ಎಂದಿದ್ದಾರೆ. ಹಿಂದಿನ ಸರ್ಕಾರಗಳನ್ನು ಗುರಿಯಾಗಿಸಿ ಮಾತನಾಡಿದ ಅವರು, ವೋಟ್ ಬ್ಯಾಂಕ್ ರಾಜಕೀಯದ ಕಾರಣದಿಂದ ಉತ್ತಮ ಸಂಬಂಧಗಳನ್ನು ನಿರ್ಮಿಸಿಕೊಳ್ಳುವುದನ್ನು ನಿರ್ಲಕ್ಷ ಮಾಡಲಾಗಿತ್ತು ಆದರೆ ಈಗ ಸಮಯ ಕಳೆದು ಹೋಗಿದೆ ಎಂದಿದ್ದಾರೆ.

"ಇಸ್ರೇಲ್‌ಗೆ ಮೊದಲು ಭೇಟಿ ನೀಡಿದವರು ಪ್ರಧಾನಿ ಮೋದಿ ಮತ್ತು ಅವರ ಅಧಿಕಾರಾವಧಿಯಲ್ಲಿ ವಿದೇಶಾಂಗ ನೀತಿಗಳು ಮಹತ್ತರವಾಗಿ ಬೆಳೆದವು" ಎಂದು ಅವರು ಒತ್ತಿ ಹೇಳಿದರು. 2017ರಲ್ಲಿ ಮೊದಲ ಬಾರಿಗೆ ಪ್ರಧಾನಿ ಮೋದಿ ಇಸ್ರೇಲ್‌ಗೆ ಭೇಟಿ ನೀಡಿದ್ದರು.

## ಚೀನೀ ಸಾಲ ಆ್ಯಪ್: ಬೆಂಗಳೂರಿನ 6 ಕಡೆ ಇಡಿ ದಾಳಿ, 17 ಕೋಟಿ ರೂ. ವಶ

ಚೀನಿ ಸಾಲದ ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಶುಕ್ರವಾರ ಬೆಂಗಳೂರಿನ ಆರು ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿತು. ಮೊಬೈಲ್ ಅಪ್ಲಿಕೇಶನ್‌ಗಳ ಮೂಲಕ ಸಣ್ಣ ಮೊತ್ತದ ಸಾಲವನ್ನು ಪಡೆದ ಸಾರ್ವಜನಿಕರಿಗೆ ಸುಲಿಗೆ ಮತ್ತು ಕಿರುಕುಳದಲ್ಲಿ ತೊಡಗಿರುವ ಚೀನಿ ಸಾಲಗಳ ಆ್ಯಪ್‌ಗಳ ವಿರುದ್ಧ ಹಲವಾರು ಘಟಕಗಳು/ವ್ಯಕ್ತಿಗಳು ಬೆಂಗಳೂರಿನ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದಾಖಲಿಸಿದ 18 ಎಫ್‌ಐಆರ್‌ಗಳನ್ನು ಆಧರಿಸಿ ಈ ದಾಳಿಗಳನ್ನು ನಡೆಸಲಾಗಿದೆ.

ವಿಚಾರಣೆಯ ಸಮಯದಲ್ಲಿ, ಈ ಆ್ಯಪ್‌ಗಳು ಚೀನಾದ ಪ್ರಜೆಗಳಿಂದ ನಿಯಂತ್ರಿಸಲ್ಪಡುತ್ತವೆ ಅಥವಾ ನಿರ್ವಹಿಸಲ್ಪಡುತ್ತವೆ ಎಂದು ತಿಳಿದುಬಂದಿದೆ. ಭಾರತೀಯರ ನಕಲಿ ದಾಖಲೆಗಳನ್ನು ಬಳಸಿ ಕಂಪನಿಗಳ ಡಮ್ಮಿ ಡೈರೆಕ್ಟರ್‌ಗಳನ್ನಾಗಿ ಮಾಡಿ, ದೊಡ್ಡ ಪ್ರಮಾಣದ ಅಪರಾಧವನ್ನು ಎಸಗಲಾಗಿದೆ ಎಂದು ತಿಳಿದು ಬಂದಿದೆ.



ಈ ಘಟಕಗಳು ಪಾವತಿ ಗೇಟ್ ವೇ/ಬ್ಯಾಂಕ್‌ಗಳನ್ನು ಹೊಂದಿರುವ ವಿವಿಧ ವ್ಯಾಪಾರಿ ಐಡಿಗಳ ಮೂಲಕ ತಮ್ಮ ಅಕ್ರಮ ವ್ಯವಹಾರವನ್ನು ನಡೆಸುತ್ತಿವೆ ಎಂದು ವರದಿಯಾಗಿದೆ. ಹುಡುಕಾಟ ಕಾರ್ಯಾಚರಣೆಯ ಭಾಗವಾಗಿ, ಇಡಿ ರೇಜರ್ ಪೇ ಪ್ರೈವೇಟ್ ಲಿಮಿಟೆಡ್, ಕ್ಯಾಶ್‌ಫ್ರೀ ಪಾವತಿಗಳು, ಪೇಟಿಎಂ ಪಾವತಿ ಸೇವೆಗಳು ಲಿಮಿಟೆಡ್ ಮತ್ತು ಚೀನಾದ ಪ್ರಜೆಗಳಿಂದ ನಿರ್ವಹಿಸಲ್ಪಡುವ ಘಟಕಗಳ ಮೇಲೆ ದಾಳಿ ನಡೆಸಿತು. ಇವು MCA ವೆಬ್‌ಸೈಟ್‌ನಲ್ಲಿ ಒದಗಿಸಲಾದ ವಿಳಾಸಗಳು ಸಹ ನಕಲಿ ಎಂದು ತಿಳಿದುಬಂದಿದೆ.

ಪಾವತಿ ಗೇಟ್ವೇಗಳು/ಬ್ಯಾಂಕ್‌ಗಳೊಂದಿಗೆ ಹೊಂದಿರುವ ವಿವಿಧ ವ್ಯಾಪಾರಿ ಐಡಿಗಳು/ಖಾತೆಗಳ ಮೂಲಕ ಈ ಘಟಕಗಳು ಅಪರಾಧದ ಆದಾಯವನ್ನು ಗಳಿಸಿವೆ ಎಂದು ಹೇಳಲಾಗುತ್ತದೆ. ಈ ಚೀನಾದ ವ್ಯಕ್ತಿಗಳ ನಿಯಂತ್ರಿತ ಸಂಸ್ಥೆಗಳ ವ್ಯಾಪಾರಿ ಐಡಿಗಳು ಮತ್ತು ಬ್ಯಾಂಕ್ ಖಾತೆಗಳಲ್ಲಿ ಇದ್ದ 17 ಕೋಟಿ ರೂಪಾಯಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಇಡಿ ಈ ಚೀನೀ ಘಟಕಗಳ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದೆ.

## ಯುಕೆಯನ್ನು ಹಿಂದಿಕ್ಕಿ ವಿಶ್ವದ 5ನೇ ಅತಿದೊಡ್ಡ ಆರ್ಥಿಕತೆಯಾದ ಭಾರತ



"ಭಾರತವು ಯುನೈಟೆಡ್ ಕಿಂಗ್‌ಡಮ್ ಅನ್ನು ಹಿಂದಿಕ್ಕಿ ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ. 2021ರ ಅಂತಿಮ ಮೂರು ತಿಂಗಳಲ್ಲಿ ಭಾರತವು ಐದನೇ ಅತಿದೊಡ್ಡ ಆರ್ಥಿಕತೆಯಾಗಲು ಮುನ್ನಡೆ ಸಾಧಿಸಿತು" ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ ಹೇಳಿದೆ. ಐಎಂಎಫ್‌ನ ಜಿಡಿಪಿ ಅಂಕಿ–ಅಂಶಗಳ ಪ್ರಕಾರ, ಮೊದಲ ತ್ರೈಮಾಸಿಕದಲ್ಲಿ ಭಾರತ ತನ್ನ ಮುನ್ನಡೆಯನ್ನು ವಿಸ್ತರಿಸಿದೆ. ಈ ವರ್ಷ ಭಾರತದ ಆರ್ಥಿಕತೆಯು ಶೇಕಡಾ 7ಕ್ಕಿಂತ ಹೆಚ್ಚು ಬೆಳೆಯುವ ಮುನ್ಸೂಚನೆ ಇದೆ. ಈ ತ್ರೈಮಾಸಿಕದಲ್ಲಿ ಭಾರತೀಯ ಷೇರುಗಳಲ್ಲಿ ಉತ್ಸಾಹ ಕಂಡು ಬಂದಿದೆ. ಉದಯೋನ್ಮುಖ ಮಾರುಕಟ್ಟೆಗಳ ಸೂಚ್ಯಂಕದಲ್ಲಿ ತಮ್ಮ ತೂಕವನ್ನು ಎರಡನೇ ಸ್ಥಾನಕ್ಕೆ ಏರಿಸಿದೆ. ಮೊದಲ ಸ್ಥಾನದಲ್ಲಿ ಚೀನಾ ಮಾತ್ರ ಇದೆ.

ಬ್ರಿಟನ್ ವಿಶ್ವದ ಆರನೇ ಅತಿದೊಡ್ಡ ಆರ್ಥಿಕತೆಯಾಗಿ ಭಾರತಕ್ಕಿಂತ ಹಿಂದೆ ಬಿದ್ದಿದೆ. ಲಂಡನ್ ದುಬಾರಿ ಜೀವನ ವೆಚ್ಚದ ಆಘಾತವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಅಲ್ಲಿನ ಸರ್ಕಾರಕ್ಕೆ ಇದು ಮತ್ತಷ್ಟು ಹೊಡೆತವನ್ನು ನೀಡಿದೆ.

## ನೌಕಾಸೇನೆಯ ಬ್ರಿಟಿಷ್ ಕಾಲದ ಧ್ವಜಕ್ಕೆ ಮುಕ್ತಿ: ಹೊಸ ಧ್ವಜ ಅನಾವರಣ



ಕೊನೆಗೂ ಭಾರತದ ನೌಕಾಸೇನೆ ಹೊಸ ಧ್ವಜವನ್ನು ಪಡೆದಿದೆ. ಈ ಮೂಲಕ ಬ್ರಿಟಿಷ್ ಕಾಲದ ಧ್ವಜಕ್ಕೆ ತಿಲಾಂಜಲಿ ನೀಡಲಾಗಿದೆ. ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ ಮೊದಲ ಸ್ವದೇಶಿ ವಿಮಾನವಾಹಕ ನೌಕೆ ಐಎಸ್‌ಎಸ್ ವಿಕ್ರಾಂತ್ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದಾರೆ. ಈ ವೇಳೆ, ನೌಕಾಪಡೆಯ ಹೊಸ ಧ್ವಜವನ್ನು ಅವರು ಅನಾವರಣಗೊಳಿಸಿದರು.

ಗುಲಾಮಗಿರಿಯ ಸಂಕೇತ, ವಸಾಹತುಶಾಹಿಯ ಕುರುಹುಗಳನ್ನು ತೆಗೆದುಹಾಕಲು ನೌಕಾಪಡೆ ಲಾಂಛನವನ್ನು ಬದಲಾಯಿಸಲಾಗಿದೆ. ಭಾರತೀಯ ಕಡಲ ಪರಂಪರೆಗೆ ಅನುಗುಣವಾಗಿ ಈ ನೌಕಾಧ್ವಜ ನಿರ್ಮಾಣಗೊಂಡಿದೆ. ನೌಕಾಧ್ವಜಕ್ಕೆ ನಿಶಾನ್ ಎಂದು ಹೆಸರಿಡಲಾಗಿದ್ದು, ರಕ್ಷಣಾ ವಲಯದಲ್ಲಿ ಆತ್ಮ ನಿರ್ಭರಕ್ಕೆ ಮತ್ತಷ್ಟು ಉತ್ತೇಜನ ಉದ್ದೇಶದಿಂದ ಹೊಸ ಧ್ವಜವನ್ನು ತಯಾರಿಸಲಾಗಿದೆ.

ನೌಕಾಪಡೆಯ ಧ್ವಜದಲ್ಲಿ ಇಲ್ಲಿಯವರೆಗೆ ನಾಲ್ಕು ಬದಲಾವಣೆಗಳನ್ನು ಮಾಡಲಾಗಿದೆ. 2001 ರಿಂದ 2004ರ ಅವಧಿಯಲ್ಲಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ಇದ್ದಾಗ ಧ್ವಜದಲ್ಲಿದ್ದ ಅಡ್ಡ ಚಿಹ್ನೆಯನ್ನು ತೆಗೆದುಹಾಕಲಾಯಿತು. ಆದರೆ ಸೋನಿಯಾ ಗಾಂಧಿ ನೇತೃತ್ವದ ಯುಪಿಎ ಕೇಂದ್ರದ ಅಧಿಕಾರಕ್ಕೆ ಬಂದ ನಂತರ ಅದನ್ನು ಮರಳಿ ತಂದಿತ್ತು.

ನೌಕಾಪಡೆಯ ಹಳೆ ಧ್ವಜವು ಬಿಳಿ ಬಣ್ಣದಲ್ಲಿದೆ. ಲಂಬ ಮತ್ತು ಅಡ್ಡ ಕೆಂಪು ಪಟ್ಟಿಗಳನ್ನು ಹೊಂದಿದೆ. ಇದು ಸೆಂಟ್ ಜಾರ್ಜ್ ಶಿಲುಬೆಯನ್ನು ಸಂಕೇತಿಸುತ್ತದೆ. ಆದರೆ, ಇದೀಗ ಹೊರ ತರಲಾದ ಹೊಸ ಧ್ವಜ ಅಶೋಕ ಚಿಹ್ನೆಯನ್ನು ಹೊಂದಿದ್ದು, ಅದರ ಕೆಳಗೆ "ಸತ್ಯಮೇವ ಜಯತೆ" ಎಂದು ಬರೆಯಲಾಗಿದೆ. ಜೊತೆಗೆ, ಮೇಲಿನ ಮೂಲೆಯಲ್ಲಿ ತ್ರಿವರ್ಣವಿದೆ. ಬ್ರಿಟಿಷರ ಕಾಲದ ಸಂಕೇತವಾಗಿರುವ ನೌಕಾಪಡೆಯ ಧ್ವಜದಲ್ಲಿರುವ ಶಿಲುಬೆಯನ್ನು ತೆಗೆದು ಹಾಕಲಾಗಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.